


ವೀರಣ್ಣ ಮಡಿವಾಳರ
ಕಲೆ: ಮುರಳೀಧರ್ ರಾಥೋಡ್



# ಪದ್ಯಗಳು

ಯಾವುದೋ ಒಂದು ಜಾಗದಲ್ಲಿ

ಹುಟ್ಟಿದಂದಿನಿಂದ ಜಾಗರವಿದ್ದೇನೆ
ನೀನು ಸಿಕ್ಕಬಹುದೆಂದು ಮತ್ತೆ ಆ ಜಾಗದಲ್ಲಿ

ಮಳೆ ಬರುವ ಹೊತ್ತು ಸೂರ್ಯ ಚಂದಿರ ಕೈ ಕೈ ಹಿಡಿದು
ಕಳ್ಳೆಮಳ್ಳೆ ಕಪಾಟಮಳ್ಳೆ ಆಟ ಆಡುವಾಗ
ಯಾರಾದರೊಬ್ಬರು ಜಾರಿ ಬೀಳುತ್ತಾರಲ್ಲ ಅಲ್ಲಿ ಆ
ಜಾಗದಲ್ಲಿ ನಿನ್ನ ಸಂಧಿಸಬೇಕು ನಾನು
ಮತ್ತೆಂದೂ ದೂರದಂತೆ ದೂರಾಗದಂತೆ

ನೀನು ಆ ದಿಕ್ಕಿನಿಂದ ನಾನು ಈ ದಿಕ್ಕಿನಿಂದ
ಸಹರಾ ಮರುಭೂಮಿಯಲ್ಲಿ ಬಿಸಿಲ ಕುದುರೆ ಏರಿ
ಬರುತ್ತಿರುವಾಗ
ಕೆಂಡದ ಹೂಗಳ ಪರಿಮಳ ಕುಡಿದು
ಆದಿಮ ಪ್ರೇಮದ ಹಸಿವಿನಲ್ಲಿ ಸಂಚರಿಸುವಾಗ
ನಕ್ಷತ್ರಗಳ ಮಳೆ ಸುರಿಯಲಿ
ಆಗ ನಿನ್ನ ತೋಳಲ್ಲಿ ನಾನು ಮಗುವಾಗಿರಲಿ
ನನ್ನ ತೋಳಲ್ಲಿ ನೀನು ಮಗಳಾಗಿರಲಿ
ಅಲ್ಲಿ ಅಂಥ ಜಾಗದಲ್ಲಿ

ದಟ್ಟ ಕಾಡು ಕ್ರೂರ ಮೃಗಗಳು ದೈತ್ಯ ಮರಗಳು
ಕಾನನದ ತುಂಬ ಹುಟ್ಟು ಸಾವಿನ ಚೀತ್ಕಾರಗಳು
ಅಂಥ ಹೊತ್ತಲ್ಲಿ ನೀನೂ ನಾನೂ ಹುಟ್ಟಬಟ್ಟೆಯಲ್ಲಿ
ಪರಸ್ಪರ ಹುಡುಕುತ್ತಿರುವಾಗ
ನೀನೊಮ್ಮೆ ನಕ್ಕು ನನ್ನ ಹೆಸರಿಡಿದು ಕರೆ
ಮಿಗ ಖಗಗಳಿಗೆಲ್ಲ ನಿನ್ನ ಸಂಭ್ರಮದ ಸೋಂಕು
ತಗುಲಲಿ ಕಾಡುಹೂಗಳೆಲ್ಲ ನಿನ್ನ ಸಂತಸದಲ್ಲಿ ಪಾಲು ಕೇಳಲಿ

